# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಮಹಾದ್ವಾರ, ಜಿ.ಕೆ.ವಿ.ಕೆ. ಆವರಣ,
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು-560097

**ದೂರವಾಣಿ : 080-29721550, email: ksta.gok@gmail.com website: www.kstacademy.in**


**ಕವಿತಂಅ/ಆಡಳತ/17/2020-21** **ದಿನಾಂಕ : 31.08.2020**

## <u>ಪ್ರಕಟಣೆ</u>

ಕನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾಗಿದ್ದು, ಕಛೇರಿ ಕೆಲಸ ಕಾರ್ಯಗಳಿಗಾಗಿ 2020-21ನೇ ಸಾಲಿಗೆ (31.03.2021 ರವರೆಗೆ) ಬೆಂಗಳೂರು ನಗರ ಮತ್ತು ವಿವಿಧ ಜಿಲ್ಲೆಗಳಿಗೆ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ಬಾಡಿಗೆ ವಾಹನಗಳ ಅವಶ್ಯಕತೆಯಿದ್ದು, ಉತ್ತಮವಾದ ಸರ್ವೀಸ್ ನೀಡುವ ಟ್ರಾವೆಲ್ಸ್‌ರವರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ವಾಹನಗಳ ದರಪಟ್ಟಿಯನ್ನು ಪ್ರಕಟಣೆಗೆ ಲಗತ್ತಿಸಿರುವ ನಮೂನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮೇಲ್ಕಂಡ ವಿಳಾಸಕ್ಕೆ **<u>ದಿನಾಂಕ : 09.09.2020 ರೊಳಗೆ ತಲುಪುವಂತೆ ಕಳುಹಿಸಿ ಕೊಡುವುದು. ಅಂಚೆ ಹಾಗೂ ಮತ್ತಿತರ ಕಾರಣಗಳಿಂದಾದ ವಿಳಂಬಕ್ಕೆ ಅಕಾಡೆಮಿಯು ಜವಾಬ್ದಾರಿಯಲ್ಲ. ಹೆಚ್ಚಿನ ವಿವರಗಳಿಗೆ ಅಕಾಡೆಮಿಯನ್ನು ಸಂಪರ್ಕಿಸಬಹುದಾಗಿದೆ</u>**.

**<u>ಷರತ್ತುಗಳು :</u>**

1. ಲಕೋಟೆಯ ಮೇಲೆ **"ಬಾಡಿಗೆ ವಾಹನಗಳ ದರಪಟ್ಟಿ"** ಎಂದು ನಮೂದಿಸಿರತಕ್ಕದ್ದು.
2. ಟ್ರಾವೆಲ್ಸ್ ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಯನ್ನು ಹೊಂದಿರತಕ್ಕದ್ದು.
3. ಉತ್ತಮ ಸ್ಥಿತಿಯಲ್ಲಿರುವ ಮತ್ತು ಉತ್ತಮ ಚಾಲಕರನ್ನು ಹೊಂದಿರುವ ವಾಹನಗಳನ್ನು ಮಾತ್ರ ನೀಡತಕ್ಕದ್ದು.
4. ಅಕಾಡೆಮಿಯು ಅವಶ್ಯಕತೆಗನುಗುಣವಾಗಿ ಕೋರಿದ ಸಂದರ್ಭದಲ್ಲಿ ಮಾತ್ರ ಬಾಡಿಗೆ ವಾಹನವನ್ನು ಕಳುಹಿಸಿಕೊಡತಕ್ಕದ್ದು.
5. ಬಾಡಿಗೆ ವಾಹನ ಬಿಲ್ಲನ್ನು ಸಲ್ಲಿಸಿದ ನಂತರ ಒಂದು ವಾರದೊಳಗಾ ಪಾವತಿ ಮಾಡಲಾಗುವುದು.
6. ಕರ್ತವ್ಯದ ಸಂದರ್ಭದಲ್ಲಿ ಯಾವುದೇ ರಿಪೇರಿ ಅಥವಾ ಅಡಚಣೆಯಾದಲ್ಲಿ ಟ್ರಾವೆಲ್ಸ್ ಸಂಸ್ಥೆಯು ಜವಾಬ್ದಾರರು.
7. ದರಪಟ್ಟಿಯನ್ನು ಸ್ವೀಕರಿಸಿದ ನಂತರ ಒಪ್ಪುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ವಿವೇಚನೆಗೆ ಬಿಡಲಾಗಿರುತ್ತದೆ.

**-ಸಹಿ-**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ**
**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ**